CS (Main) Exam 2019

SDF-B-KND

ಕನ್ನಡ / KANNADA

ಪತ್ರಿಕೆ II / Paper II

(ಸಾಹಿತ್ಯ) / (LITERATURE)

ವೇಳೆ : **ಮೂರು** ಗಂಟೆ *Time Allowed : **Three** Hours*	ಗರಿಷ್ಠ ಅಂಕಗಳು : **250** *Maximum Marks : **250***

ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು** ಭಾಗಗಳಲ್ಲಿ ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ **1** ಮತ್ತು **5**ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

Question Paper Specific Instructions

Please read each of the following instructions carefully before attempting questions :

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Question nos. **1** and **5** are compulsory and out of the remaining, any **THREE** are to be attempted choosing at least **ONE** question from each section.*

The number of marks carried by a question / part is indicated against it.

*Answers must be written in **KANNADA (Kannada script)**.*

Word limit in questions, wherever specified, should be adhered to.

Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.

Optional Province · optionalprovince.com

SECTION A

Q1. ಈ ಕೆಳಗಿನ ಪದ್ಯಗಳ ಸಂದರ್ಭವನ್ನು ಸೂಚಿಸಿ ಅವುಗಳ ಭಾವ ಮತ್ತು ಸ್ವಾರಸ್ಯವನ್ನು ಕುರಿತು ಬರೆಯಿರಿ. (ಪ್ರತಿಯೊಂದೂ 150 ಪದಗಳ ಉತ್ತರ ಮಿತಿಯಲ್ಲಿ) ***10×5=50***

(a) ಪಸರಿಸಿ ಪಂದಲೆಯಂ ಮೆ ।
ಟ್ಟಿಸಿ ವೈರಿಯ ಪಲ್ಲ ಪಣಿಗೆಯಿಂ ಬಾರ್ಚಿ ಪೊದ ॥
ಳ್ದೊಸಗೆ ಯಿನವನ ಕರುಳ್ಗಳೆ ।
ಪೊಸ ವಾಸಿಗಮೊಗೆ ಕೃಷ್ಣೆಯಂ ಮುಡಿಯಿಸಿದಂ *10*

(b) ನೆಲದ ಮರೆಯ ನಿದಾನದಂತೆ,
ಮುಗಿಲ ಮರೆಯಲಡಗಿದ ಮಿಂಚಿನಂತೆ,
ಬಯಲ ಮರೆಯಲಡಗಿದ ಮರೀ ಚಿಯಂತೆ,
ತಂಗಳೆ ಮರೆಯಲಡಗಿದ ಬೆಳಗಿನಂತೆ,
ಗುಹೇಶ್ವರ ನಿಮ್ಮ ನಿಲುವು *10*

(c) ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸ ಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆಕಂಡ್ಯಾ ಮನುಜ ॥ *10*

(d) ಬಂದು ಬನಮಂ ಪೊಕ್ಕು ಮಿಕ್ಕ ಸಂತೋಷದಿಂ
ಮುಂದೆ ಸಿಂಹಾಸನವ ನಿಕ್ಕಲು ವಿಲಾಸದಿಂ ।
ದೆಸೆಯೆ ಕುಳ್ಳಿರ್ದನಾ ಸುಕುಮಾರ ಸೌಂದರಂ
ವಸುಧೆಗೊಪ್ಪುವ ಮರ್ತ್ಯಮಂಡಲ ಪುರಂದರಂ ॥ *10*

(e) ಉಂಡುಪ್ರವಾಸಿ ಬಳಸಿ ಬ್ರಹ್ಮ ಚಾರಿ ಭೂ
ಮಂಡಲವಿದ್ದು ನಿಸ್ಸಂಗ
ಮಂಡೆ ಬೆಳೆದು ಮನ ಬೋಳಾದ ತಪಸಿಯ
ಕೊಂಡಾಡಲಳವೆ ಚಕ್ಕಿಯ *10*

Optional Province · optionalprovince.com

Q2. (a) ಪಂಪನ 'ವಿಕ್ರಮಾರ್ಜುನ ವಿಜಯ' ಮತ್ತು ನಾರಣಪ್ಪನ 'ಕುಮಾರವ್ಯಾಸ ಭಾರತ' ಗಳಲ್ಲಿ ಚಿತ್ರಿತವಾದ ಕರ್ಣನ ಪಾತ್ರದ ಸಾಮ್ಯ, ವ್ಯತ್ಯಾಸ ಮತ್ತು ವೈಶಿಷ್ಟ್ಯಗಳನ್ನು ಚರ್ಚಿಸಿ. *20*

(b) 'ವಡ್ಡಾರಾಧನೆ' ಯ ಕಥೆಗಳು ಬರಿ "ಮನರಂಜನೆಗೋ ಅಥವಾ ಕಲಾಭಿವ್ಯಕ್ತಿಗೋ ಬರೆದ ಕಥೆಗಳಲ್ಲ. ಬದಲಾಗಿ ಧರ್ಮಾವಲಂಬನಾ ಮಾರ್ಗದವು" ಎನ್ನುವ ಮಾತನ್ನು ನಿಮಗೆ ನಿಗದಿತವಾಗಿರುವ ಎರಡು ಕಥೆಗಳ ಆಧಾರದಲ್ಲಿ ಸಮರ್ಥಿಸಿ. *20*

(c) ಹಳೆಗನ್ನಡ ಮತ್ತು ನಡುಗನ್ನಡ ಕಾವ್ಯವೆಲ್ಲವೂ ಭೋಗ-ವೈರಾಗ್ಯ-ಭಕ್ತಿಗಳ ನಾಟ್ಯೀಕರಣವಾಗಿದೆ ಎನ್ನುವ ಮಾತನ್ನು ನಿಮಗಿಟ್ಟಿರುವ ಯಾವುದಾದರೂ ಎರಡು ಕಾವ್ಯಗಳ ಆಧಾರದಲ್ಲಿ ಪರಿಶೀಲಿಸಿ. *10*

Q3. (a) ಭಕ್ತಿ ಮತ್ತು ಸಾಮಾಜಿಕ ಚಿಂತನೆ. ಈ ಎರಡೂ ದೃಷ್ಟಿಯಿಂದ ವಚನಕಾರರು ತುಳಿದ ಕ್ರಾಂತಿಕಾರಿ ಹಾದಿಯನ್ನು ಚರ್ಚಿಸಿ, ವಚನಗಳು ಇಂದಿಗೂ ಹೇಗೆ ಪ್ರಸ್ತುತವಾಗಿವೆ ಎಂದು ನಿರೂಪಿಸಿ. *20*

(b) ಕಂದಾಚಾರ, ಢಾಂಭಿಕತೆ ಮತ್ತು ಸಾಮಾಜಿಕ ವಿಷಮತೆಗಳನ್ನು ಪ್ರಶ್ನಿಸಿದ ಕನಕದಾಸರು ಉನ್ನತ ನೈತಿಕ ಮೌಲ್ಯಗಳನ್ನು ತಮ್ಮ ಕೃತಿಗಳಲ್ಲಿ ಹೇಗೆ ಎತ್ತಿ ಹಿಡಿದರು ಎಂದು ವಿವರಿಸಿ. *20*

(c) 'ನಂಬಿಯಣ್ಣನ ರಗಳೆ' ಕಾವ್ಯಾತ್ಮಕ ಜೀವನ ಚರಿತ್ರೆಯ ಲಕ್ಷಣಗಳನ್ನು ಹೊಂದಿದ ವೈರಾಗ್ಯ ಕಥನ-ವಿವರಿಸಿ. *10*

Q4. (a) ತಳ ಸಮುದಾಯಗಳ ಸಂವೇದನೆಯನ್ನು ಹೊಂದಿದ ಅಂಬಿಗರ ಚೌಡಯ್ಯ, ತುರುಗಾಹಿ ರಾಮಣ್ಣ, ಥಕ್ಕೆಯ ಬೊಮ್ಮಯ್ಯ, ಮಾದಾರ ಚೆನ್ನಯ್ಯ ಮೊದಲಾದವರ ವಚನಗಳ ವೈಶಿಷ್ಟ್ಯಗಳನ್ನು ಚರ್ಚಿಸಿ. *20*

(b) ರತ್ನಾಕರವರ್ಣಿಯ ಮನೋಹರ ಶೈಲಿ ಮತ್ತು ಚಿತ್ರಕ ಶಕ್ತಿಯನ್ನು 'ಭರತೇಶ ವೈಭವ' ದ ಶೃಂಗಾರ ವರ್ಣನೆಯ ಭಾಗಗಳ ಉದಾಹರಣೆಗಳಿಂದ ವಿವರಿಸಿ. *20*

(c) 'ಕುಮಾರವ್ಯಾಸ ಭಾರತ' ದ 'ಕರ್ಣ' ಪರ್ವದಲ್ಲಿ ಕಂಡುಬರುವ ಕುಮಾರವ್ಯಾಸನ ರೂಪಕ ಶಕ್ತಿಯನ್ನು ವಿಶದೀಕರಿಸಿ. *10*

Optional Province · optionalprovince.com

SECTION B

Q5. ಈ ಕೆಳಗಿನವುಗಳನ್ನು ಕುರಿತು ಟಿಪ್ಪಣಿ ಬರೆಯಿರಿ.

(ಪ್ರತಿಯೊಂದೂ 150 ಪದಗಳ ಉತ್ತರ ಮಿತಿಯಲ್ಲಿ) ***10×5=50***

(a) ಗಿರೀಶ್ ಕಾರ್ನಾಡರ ನಾಟಕದಲ್ಲಿ ತುಘಲಕ್ ಪಾತ್ರದ ವಿಲಕ್ಷಣತೆ. *10*

(b) ವಿ.ಕೃ. ಗೋಕಾಕ ಮತ್ತು ಗೋಪಾಲಕೃಷ್ಣ ಅಡಿಗರ ಕವಿತೆಗಳಲ್ಲಿನ ನವ್ಯತೆಯ ಅಂಶಗಳು. *10*

(c) 'ಬೀದಿ ಮಕ್ಕಳು ಬೆಳದೋ' ಸಂಕಲನದ ಗಾದೆಗಳಲ್ಲಿ ಹೆಣ್ಣಿನ ಸ್ಥಾನ ಮಾನ. *10*

(d) ಕನ್ನಡ ಒಗಟುಗಳಲ್ಲಿ ಮಡುಗಟ್ಟಿದ ಅನುಭವ, ವಿವೇಕ ಮತ್ತು ಸೊಬಗು. *10*

(e) ಕನ್ನಡ ಜನಪದ ಕತೆಗಳ ವರ್ಗೀಕರಣ. *10*

Q6. (a) ಪ್ರಗತಿಶೀಲ ಕತೆಗಳು ನವೋದಯ ಕತೆಗಳ ವಸ್ತು, ಆಶೆಯ ಮತ್ತು ಸ್ವರೂಪಗಳನ್ನು ಪ್ರಶ್ನಿಸುವ ಬಗೆಯನ್ನು ನಿಮಗಿಟ್ಟಿರುವ ಪಠ್ಯದಲ್ಲಿನ ಕತೆಗಳ ಹಿನ್ನೆಲೆಯಲ್ಲಿ ಚರ್ಚಿಸಿ. *20*

(b) 'ಶೂದ್ರ ತಪಸ್ವಿ' ನಾಟಕದ ಶೀರ್ಷಿಕೆಯ ಪ್ರತೀಕಾತ್ಮಕತೆಯನ್ನೂ, ಅದರ ಪ್ರತಿಭಟನಾ ನೆಲೆಗಳನ್ನೂ ಪರಿಶೀಲಿಸಿ. *20*

(c) ಕೆ.ಎಸ್.ನ. ಅವರ ಕವಿತೆಗಳ ಪ್ರಾಮುಖ್ಯವನ್ನು ಗುರುತಿಸಿ, ಚರ್ಚಿಸಿರಿ. *10*

Q7. (a) "ಸುಖ ದುಃಖದಲ್ಲಿ ಬದುಕು ಹದವಾಗುವ ಬಗೆಯನ್ನು ಕಾರಂತರು ತಮ್ಮ ಕಾದಂಬರಿಗಳ ಮೂಲಕ ಗುರುತಿಸಿದ್ದಾರೆ" ಎನ್ನುವ ಯು.ಆರ್. ಅನಂತ ಮೂರ್ತಿ ಅವರ ಮಾತನ್ನು 'ಬೆಟ್ಟದಜೀವ' ಕಾದಂಬರಿಯ ಹಿನ್ನೆಲೆಯಲ್ಲಿ ವಿವೇಚಿಸಿ. *20*

(b) 'ಬಡಲಾಳ' ಹೇಗೆ ದಲಿತ ಬದುಕಿನ ಜ್ವಲಂತ ಸತ್ಯವನ್ನು ದಾಖಲಿಸುತ್ತಲೇ ದಲಿತರ ಶಕ್ತಿ ಮತ್ತು ಜೀವನ ಪ್ರೀತಿಯ ಕತೆಯೂ ಆಗಿದೆ ಎನ್ನುವುದನ್ನು ನಿರೂಪಿಸಿ. *20*

(c) "ಅನುಪಮಾ ನಿರಂಜನ ಅವರ ಕಾದಂಬರಿಯ ಮಾಧವಿಯ ಪಾತ್ರ, ಪಿತೃ ಪ್ರಧಾನ ಸಮಾಜಕ್ಕೆ ಒಡ್ಡಿದ ಸವಾಲು" – ಚರ್ಚಿಸಿ. *10*

Optional Province · optionalprovince.com

Q8. (a) ಕನ್ನಡ ಜನಪದ ಗೀತೆಗಳ ಕಾವ್ಯಾತ್ಮಕತೆ, ಸಾಮಾಜಿಕತೆ ಮತ್ತು ಅವುಗಳಲ್ಲಿ ಚಿತ್ರಿತವಾಗಿರುವ ಮನುಷ್ಯ ಸಂಬಂಧವನ್ನು ವಿಮರ್ಶಿಸಿ. *20*

(b) "ಮಾನವ ಮತದ ಅನುಯಾಯಿಗಳು ನಿರೀಶ್ವರವಾದಿಗಳಾದರೂ ದೈವ ಭಕ್ತರೇ." ಎ.ಎನ್. ಮೂರ್ತಿರಾಯರ ಈ ಮಾತಿನ ಅಂತರಾರ್ಥ ಏನು ? ಅವರ ಪ್ರಕಾರನಾವು ಒಪ್ಪ ಬೇಕಾದ ಮತ ಯಾವುದು ? ಚರ್ಚಿಸಿ. *20*

(c) ಕನ್ನಡ ಜಾನಪದ ಅಧ್ಯಯನಕ್ಕೆ 'ಜಾನಪದ ಸ್ವರೂಪ' ಕೃತಿಯ ಕೊಡುಗೆಯನ್ನು ವಿವರಿಸಿ. *10*

Optional Province · optionalprovince.com